# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಅಧಿಸೂಚನೆ

**ಸಂಖ್ಯೆ: ಕವಿಪ್ರನಿನಿ/ಬಿ16/86473/2018-19** **ದಿನಾಂಕ:** 18 JUN 2020

**ವಿಷಯ:** ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್ ಹುದ್ದೆಯ ನೇಮಕಾತಿ-ಸಹನಾ ಶಕ್ತಿ ಪರೀಕ್ಷೆ ನಡೆಸುವ ಬಗ್ಗೆ.

**ಉಲ್ಲೇಖ:** 1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/86473/2018-19 ಮತ್ತು ಕವಿಪ್ರನಿನಿ/ಬಿ16/86473(ಹೆಚ್.ಕೆ.)/2018-19 ದಿ: 25.02.2019 ಮತ್ತು ತಿದ್ದುಪಡಿ ದಿನಾಂಕ 11.03.2019.
2. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/3590/89-90(2), ದಿನಾಂಕ: 28.03.2019.

*****

ಉಲ್ಲೇಖಿತ ಉದ್ಯೋಗ ಪ್ರಕಟಣೆಗಳನ್ವಯ, ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಹಾಗೂ ಕಿರಿಯ ಪವರ್‌ಮ್ಯಾನ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ರಾಜ್ಯಾದ್ಯಂತ ವಿವಿಧ ಕೇಂದ್ರಗಳಲ್ಲಿ **ದಿನಾಂಕ: 21.10.2019 ರಿಂದ 25.10.2019** ರವರೆಗೆ ಹಾಗೂ **26.12.2019 ರಿಂದ 28.12.2019 ರವರೆಗೆ** ಮೆರಿಟ್ ಆಧಾರದ ಮೇಲೆ 1:5 ರ ಅನುಪಾತದಲ್ಲಿ ಸಹನಾ ಶಕ್ತಿ ಪರೀಕ್ಷೆಯನ್ನು ನಡೆಸಲಾಗಿತ್ತು. **ಸದರಿ ಪರೀಕ್ಷೆಯಲ್ಲಿ ಹಲವಾರು ಅಭ್ಯರ್ಥಿಗಳು ಗೈರುಹಾಜರಾಗಿದ್ದು ಹಾಗೂ ಇನ್ನು ಕೆಲವು ಅಭ್ಯರ್ಥಿಗಳು ಅನರ್ಹಗೊಂಡಿರುತ್ತಾರೆ**. ಆದುದ್ದರಿಂದ, ಕೆಲವು ಪ್ರವರ್ಗಗಳು ಹಾಗೂ ಕೋಟಾದಡಿಯಲ್ಲಿ ಆಯ್ಕೆಗೆ ಅರ್ಹ ಅಭ್ಯರ್ಥಿಗಳ ಕೊರತೆ ಇರುತ್ತದೆ. ಈ ಹಿನ್ನಲೆಯಲ್ಲಿ 1:5 ಅನುಪಾತದಲ್ಲಿ ಈ ಹಿಂದೆ ಕರೆಯಲಾಗಿದ್ದ ಅಭ್ಯರ್ಥಿಗಳನ್ನು ಹೊರತುಪಡಿಸಿ, down the line ನಲ್ಲಿ ಲಭ್ಯವಿರುವ ಅರ್ಹ ಅಭ್ಯರ್ಥಿಗಳನ್ನು ಸಹನಾ ಶಕ್ತಿ ಪರೀಕ್ಷೆಗೆ ಒಳಪಡಿಸಬೇಕಿರುತ್ತದೆ.

ಆದುದ್ದರಿಂದ, ಎಸ್‌ಎಸ್‌ಎಲ್‌ಸಿ/10 ನೇ ತರಗತಿಯಲ್ಲಿ ಗಳಿಸಿರುವ ಅಂಕಗಳ ಅರ್ಹತೆ ಆಧಾರದ ಮೇಲೆ 1:5 ರ ಅನುಪಾತದಲ್ಲಿನ ಅಭ್ಯರ್ಥಿಗಳನ್ನು ಹೊರತುಪಡಿಸಿ, ಕೆಲವು ಪ್ರವರ್ಗಗಳು ಹಾಗೂ ಕೋಟಾದಡಿಯಲ್ಲಿ ಸಹನಾ ಶಕ್ತಿ ಪರೀಕ್ಷೆಗೆ ಅರ್ಹವಿರುವ ಅಭ್ಯರ್ಥಿಗಳ ಹೆಸರುಗಳನ್ನು ಹಾಗೂ ಶೇಕಡವಾರು ಕಟ್ ಆಫ್ (Cut-off) ಅನ್ನು ಕವಿಪ್ರನಿನಿ ಮತ್ತು ಎಸ್ಕಾಂಗಳ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಲಾಗಿದೆ. ಸದರಿ ಪಟ್ಟಿಯಲ್ಲಿನ ಅಭ್ಯರ್ಥಿಗಳು ಕವಿಪ್ರನಿನಿ ಹಾಗೂ ಎಸ್ಕಾಂಗಳ ವೆಬ್‌ಸೈಟ್‌ನಿಂದ ಸಹನಾ ಶಕ್ತಿ ಕರೆ ಪತ್ರಗಳನ್ನು **ದಿನಾಂಕ: 18.06.2020** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಕರೆ ಪತ್ರದಲ್ಲಿ ನಿಗಧಿಪಡಿಸಿರುವ ದಿನಾಂಕ ಮತ್ತು ಕೇಂದ್ರದಲ್ಲಿ, ಸಂಬಂಧಪಟ್ಟ ಎಲ್ಲಾ ದಾಖಲಾತಿಗಳ ಮೂಲ ಹಾಗೂ ಝೆರಾಕ್ಸ್ ಪ್ರತಿಗಳೊಂದಿಗೆ ಅಭ್ಯರ್ಥಿಗಳು ಸಹನಾ ಶಕ್ತಿ ಪರೀಕ್ಷೆಗೆ ಹಾಜರಾಗತಕ್ಕದ್ದು. ಕವಿಪ್ರನಿನಿ/ಎಸ್ಕಾಂಗಳಲ್ಲಿ ಸಹನಾ ಶಕ್ತಿ ಪರೀಕ್ಷೆಯನ್ನು ಈ ಕೆಳಕಂಡ ದಿನಾಂಕಗಳಂದು ನಡೆಸಲಾಗುವುದು ಮತ್ತು ಪರೀಕ್ಷಾ ಕೇಂದ್ರಗಳ ಬದಲಾವಣೆ ಬಗ್ಗೆ ಅಭ್ಯರ್ಥಿಗಳ ಯಾವುದೇ ಮನವಿ/ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ.

| ನಿಗಮ/ಕಂಪನಿಯ ಹೆಸರು | ಸಹನಾ ಶಕ್ತಿ ಪರೀಕ್ಷೆಯ ದಿನಾಂಕ | ವೆಬ್‌ಸೈಟ್ | ಸಹಾಯವಾಣಿ ಸಂಖ್ಯೆ |
|---|---|---|---|
| ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ) | 28.06.2020 ರಿಂದ 04.07.2020 | https://kptcl.karnataka.gov.in | 080-22211527 Ext 3789, 3872 |
| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚಾವಿಸನಿನಿ) | 30.06.2020 | www.cescmysore.org | 0821-2343384 |
| ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಮವಿಸಕಂನಿ) | 29.06.2020 | https://mescom.karnataka.gov.in | 0824-2885759 |
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹುವಿಸಕಂನಿ) | 01.07.2020 | www.hescom.co.in | 0836-2223867, 0836-2223865 |
| ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಗುವಿಸಕಂನಿ) | 29.06.2020 | www.gescom.in | 08472-256647, 08472-239004 |

ಸಹನಾ ಶಕ್ತಿ ಪರೀಕ್ಷೆಗೆ ಇ-ಕರೆ ಪತ್ರವನ್ನು ಪಡೆದುಕೊಳ್ಳಲು ತೊಂದರೆ ಉಂಟಾದಲ್ಲಿ, ಅಭ್ಯರ್ಥಿಯು ಯಾವ ಕಂಪನಿಯಲ್ಲಿ ಸಹನಾ ಶಕ್ತಿ ಪರೀಕ್ಷೆಗೆ ಅರ್ಹರಾಗಿರುತ್ತಾರೋ, ಆ ಕಂಪನಿಯ ಸಹಾಯವಾಣಿಯನ್ನು ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸುವುದು. ಇನ್ನುಳಿದ ಹೆಚ್ಚಿನ ಮಾಹಿತಿಯನ್ನು ಕರೆ ಪತ್ರದಲ್ಲಿ ನೀಡಲಾಗಿರುತ್ತದೆ.

***ಸೂಚನೆ:***

1. ***ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವಾಗ ಕೆಲವು ಅಭ್ಯರ್ಥಿಗಳು ಅಂಕಗಳನ್ನು ತಪ್ಪಾಗಿ ನಮೂದಿಸಿರುತ್ತಾರೆ. ಅಭ್ಯರ್ಥಿಯ ಮೂಲ ಅಂಕಪಟ್ಟಿಯನ್ನು ಸಹನಾ ಶಕ್ತಿ ಪರೀಕ್ಷೆ ದಿನದಂದು ಪರಿಶೀಲಿಸಿದ ನಂತರ, ಸದರಿಯವರ ಶೇಕಡವಾರು ಅಂಕವು ನಿಗಧಿಪಡಿಸಿದ ಕ್ಯಾಟಗರಿಯ ಕಟ್ ಆಫ್‌ಗಿಂತ (Cut-off) ಹೆಚ್ಚಿದ್ದಲ್ಲಿ ಮಾತ್ರ ಸಹನಾ ಶಕ್ತಿ ಪರೀಕ್ಷೆಗೆ ಪರಿಗಣಿಸಲಾಗುವುದು. ಒಂದು ವೇಳೆ ಅಭ್ಯರ್ಥಿಯ ಶೇಕಡವಾರು ಅಂಕವು ನಿಗಧಿಪಡಿಸಿದ ಕಟ್ ಆಫ್‌ಗಿಂತ ಕಡಿಮೆ ಇದ್ದಲ್ಲಿ, ಅಂತಹವರನ್ನು ಸಹನಾ ಶಕ್ತಿ ಪರೀಕ್ಷೆಗೆ ಪರಿಗಣಿಸುವುದಿಲ್ಲ.***
2. ***ಕೋವಿಡ್‌19 ವೈರಾಣು ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಭ್ಯರ್ಥಿಗಳು ಕಡ್ಡಾಯವಾಗಿ ಸಹನಾ ಶಕ್ತಿ ಪರೀಕ್ಷೆಗೆ ಹಾಜರಾಗುವಾಗ ಮಾಸ್ಕ್ ಅನ್ನು ಧರಿಸತಕ್ಕದ್ದು ಹಾಗೂ ಪರೀಕ್ಷಾ ಕೇಂದ್ರದಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.***

3. *ಸಹನಾ ಶಕ್ತಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಮೊಬೈಲ್‌ಗಳಲ್ಲಿ 'ಆರೋಗ್ಯ ಸೇತು' ಆಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಸೂಕ್ತವಾಗಿರುತ್ತದೆ.*

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ,
ಕಾವೇರಿ ಭವನ, ಬೆಂಗಳೂರು.